ಕರ್ನಾಟಕ ಸರ್ಕಾರ

ರಾಷ್ಟ್ರೀಯ ಸೇವಾ ಯೋಜನೆ ಕೋಶ

ಸಂಖ್ಯೆ: ಪಪೂಶಿಇ/692/ಸ್ಕೌಟ್ಸ್-ಗೈಡ್ಸ್/2020-21

ನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು -560012.
ದಿನಾಂಕ:13/05/2020

**ಸುತ್ತೋಲೆ**

ವಿಷಯ : ಕೋವಿಡ್ -19 ಲಾಕ್‌ಡೌನ್ ಅವಧಿಯಲ್ಲಿ ಕೇಂದ್ರ ಸರ್ಕಾರದ IGOT (Intergrated Government online Training) ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ರೂಪಿಸಿರುವ 'ಸಂಕಲ್ಪ' online ಜಾಗೃತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಬಗ್ಗೆ.

ಉಲ್ಲೇಖ : 1.ಸಂಖ್ಯೆ: BSG/SHQ/059/2020-21 Dt:11/05/2020
2.ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರ ಪತ್ರ ಸಂಖ್ಯೆ:016/2020-21ದಿ:27/04/2020

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖ(1)ರಲ್ಲಿ ಕೋರಿರುವಂತೆ ಕೋರೋನಾ ಮಹಾಮಾರಿ ರೋಗವು ದೇಶದಾದ್ಯಂತ ವ್ಯಾಪಕವಾಗಿ ಹರಡುತ್ತಿದ್ದು, ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಪದವಿ ಪೂರ್ವ ಶಿಕ್ಷಣದ ಹಂತದಲ್ಲಿ ಜಾಗೃತಿ ಮೂಡಿಸುವ ಸಲುವಾಗಿ, ಉಲ್ಲೇಖ(2)ರಲ್ಲಿ online ತರಬೇತಿಗೆ ಆದೇಶಿಸಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಕೋರೋನಾ ಜಾಗೃತಿ ಸಂಕಲ್ಪದ ಕುರಿತಾಗಿ ಉಲ್ಲೇಖ(2)ರಲ್ಲಿ ನೀಡಿದ ಆದೇಶವನ್ನು ಮುಂದುವರಿಸುತ್ತಾ, ಕೇಂದ್ರ ಸರ್ಕಾರದ IGOT(Intergrated Government online Training) ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ರೂಪಿಸಿರುವ 'ಸಂಕಲ್ಪ' online ಜಾಗೃತಿ ಕಾರ್ಯಕ್ರಮದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ Virtual Meetings ನ ಮೂಲಕ ಸಂಬಂಧ ಪಟ್ಟ ಇಲಾಖೆಯಿಂದ ಹೆಚ್ಚಿನ ಮಾಹಿತಿಗಳನ್ನು ನೀಡಲು, ಉಲ್ಲೇಖ(1)ರಲ್ಲಿ ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರು ಕೋರಿರುತ್ತಾರೆ, ರೋಗ ನಿಯಂತ್ರಿಸುವ ಸುರಕ್ಷತಾ ಕ್ರಮಗಳ ಬಗ್ಗೆ ನಾಗರಿಕ ಜಾಗೃತಿಯ ಅನುಷ್ಠಾನದ ಉದ್ದೇಶದಿಂದ ಇಲಾಖೆಯ ಎಲ್ಲಾ ಉಪನಿರ್ದೇಶಕರುಗಳು online ಕಾರ್ಯಕ್ರಮದಲ್ಲಿ ಭಾಗವಹಿಸಲು ಅನುಮತಿ ನೀಡಲಾಗಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

ಪ್ರತಿಗಳು :

1. ಪದವಿ ಪೂರ್ವ ಇಲಾಖೆಯ ಎಲ್ಲಾ ಉಪನಿರ್ದೇಶಕರುಗಳಿಗೆ
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

Scanned with CamScanner

<u>ಪ್ರತಿಯನ್ನು ಮಾಹಿತಿಗಾಗಿ</u>

3. ಜಂಟಿ ನಿರ್ದೇಶಕರು (ಆಡಳಿತ/ಶೈಕ್ಷಣೀಕ/ಮಾನ್ಯತೆ–ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು.)
4. ರಾಜ್ಯ ಮುಖ್ಯ ಆಯುಕ್ತರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ #39, ಶಾಂತಿಗೃಹ, ಪ್ಯಾಲೇಸ್ ರೋಡ್ ಬೆಂಗಳೂರು–560001.
5. ನಿರ್ದೇಶಕರ ಆಪ್ತ ಶಾಖೆ
6. ಇ–ಆಡಳಿತ
7. ಕಛೇರಿ ಪ್ರತಿ

Scanned with CamScanner